

# ಸೈಬರ್ ವಾರ್

## ತೈಲ ಬಿಕ್ಕಟ್ಟು ತಂದಿಟ್ಟ ಹ್ಯಾಕರ್

ಆಧುನಿಕ ಜಗತ್ತಿನ ಅತ್ಯವಶ್ಯ ಬೇಡಿಕೆಯಾಗಿರುವ ತೈಲಕ್ಕಾಗಿ ಯುದ್ಧಗಳೇ ನಡೆದಿವೆ. ಇಂಥ ಸಂಘರ್ಷಗಳಿಗೆ ಸೈಬರ್ ಯುದ್ದ ಪುಷ್ಟಿ ನೀಡುತ್ತಿದೆ. ವಿಶ್ವದ ಅತಿ ದೊಡ್ಡ ತೈಲ ಉತ್ಪಾದಕ ಕಂಪನಿ, ಸೌದಿ ಅರೇಬಿಯಾದ ಸೌದಿ ಅರಾಂಕೊದ ಮೇಲೆ 2019ರಲ್ಲಿ ಸೈಬರ್ ದಾಳಿ ಆಯಿತು. ಕಂಪನಿಯ ಡೇಟಾದ ಮೇಲೆ ಸೈಬರ್ ಬ್ರಹ್ಮಾಸ್ತ್ರ ಬಿಟ್ಟು ದಾಳಿ ಮಾಡುವ ಮೂಲಕ ಹೂಡಿಕೆದಾರರನ್ನು ಹಿಂದೆ ಸರಿಯುವಂತೆ ಮಾಡುವುದು ಆ ದಾಳಿಯ ಉದ್ದೇಶವಾಗಿತ್ತು. ದಾಳಿಯಿಂದಾಗಿ ತೈಲ ಉತ್ಪಾದನೆ ನಿಧಾನವಾಯಿತು. ಆ ಸೈಬರ್ ಯುದ್ಧ ಇರಾನಿನ ಕುಕೃತ್ಯ ಎಂದು ಸೌದಿ ಮತ್ತು ಅಮೆರಿಕ ದೇಶಗಳು ಆರೋಪ ಮಾಡಿದವು. ಇರಾನ್ ಇದನ್ನು ಯೆಮನ್ ಮೇಲೆ ಹೊರಿಸಿತು. ಅಜ್ಞಾತ ಸ್ಥಳದಲ್ಲಿ ಕೂತು ಕೃತ್ಯವೆಸಗಿದ ಆ ಕಪ್ಪು ಟೊಪ್ಪಿಗೆ ಹ್ಯಾಕರ್ ಯಾರು ಎಂಬುದು ಮಾತ್ರ ಇಂದಿಗೂ ನಿಗೂಢವಾಗಿಯೇ ಉಳಿದಿದೆ.

## ಅನುಮಾನಗಳ ಗೋರಿ ಕೊರೊನಾ

ಪ್ರಸ್ತುತ ಯಾರ ಊಹೆಗೂ ನಿಲುಕದ, ಕಣ್ಣಿಗೂ ಕಾಣದ ವೈರಸ್ ಒಂದು ಹೊಸ್ತಿಲಾಚೆ ಹೆಜ್ಜೆ ಇಡದಂತೆ ಭಾಗಶಃ ಜಗತ್ತನ್ನೇ ಕೊರೊನಾ ಗೃಹಬಂಧನಕ್ಕೆ ಒಳಗುಮಾಡಿದೆಯಲ್ಲವೇ? ಒಬ್ಬರಿಗೊಬ್ಬರ ಉಸಿರು ತಾಕದಂತೆ ದೂರವಿರಿ, ಕೈತೊಳೀತಾ ಇರಿ, ಬಾಯ್ಮುಚ್ಚಿಕೊಂಡಿರಿ ಎಂಬಿತ್ಯಾದಿ ನಿತ್ಯಬದುಕಿನ ಆರಾಮವನ್ನು ಹರಣಗೊಳಿಸುವ ನೂರು ನಿಯಮಗಳಲ್ಲಿ ನಮ್ಮನ್ನು ಬಂಧಿಸಿರುವ ಕೊರೊನಾ ವೈರಾಣುವನ್ನು ಎದುರಿಸುವ ಹೋರಾಟದಲ್ಲಿಯೂ ಹಂಪುಗಳಾಗುತ್ತಿರುವುದು ಸೈಬರ್ ಲೋಕದ ಪಾತಕಿಗಳೇ ಎಂದರೆ ನಂಬುವುದು ಕಷ್ಟ.

ಕೊರೊನಾವನ್ನು ಜೈವಿಕ ಸಮರ (ಬಯೋಲಾಜಿಕಲ್ ವಾರ್) ಎಂದೂ ಶಂಕಿಸಲಾಗುತ್ತಿದೆ. ಅದು ಎಷ್ಟು ಸತ್ಯವೋ ಸುಳ್ಳೋ ಎಂಬುದನ್ನು ಕಾಲವೇ ನಿರ್ಣಯಿಸಬೇಕು. ಕೊರೊನಾ ಮಾರಿಯನ್ನು ಜಯಿಸಬೇಕಾದರೆ ಲಸಿಕೆ ಕಂಡುಹಿಡಿಯುವುದೊಂದೇ ಉಪಾಯ. ಈ ನಿಟ್ಟಿನಲ್ಲಿ ಜಗತ್ತಿನಾದ್ಯಂತ ದೊಡ್ಡ ಮಟ್ಟದಲ್ಲಿ ಪ್ರಯತ್ನಗಳೂ ನಡೆಯುತ್ತಿವೆ. ಎಲ್ಲಾ ರಾಷ್ಟ್ರಗಳು ಜೊತೆಗೂಡಿ ಲಸಿಕೆ ಕಂಡು ಹಿಡಿಯಲು ಸಿದ್ದರಾಗಿದ್ದೇವೆ, ಸಂಶೋಧಕರೆಲ್ಲ ಒಟ್ಟಾಗಿ ಕಾರ್ಯನಿರ್ವಹಿಸೋಣ ಎನ್ನುವಾಗ, ಮಾಹಿತಿಗೆ ಕನ್ನ ಹಾಕುವ ಸೈಬರ್ ಯುದ್ಧದ ಗುಮ್ಮ ಎದುರಾಗಿದೆ. 2019ರಲ್ಲಿ ತನ್ನ ಮೇಲೆ ಸೈಬರ್ ದಾಳಿ ನಡೆದು ಮಾಹಿತಿ ಕನ್ನಕ್ಕೆ ಒಳಗಾದ ನಂತರ ವಿಶ್ವಸಂಸ್ಥೆ ಕೂಡ ಇದನ್ನೇ ಹೇಳುತ್ತಿದೆ. ರಾಷ್ಟ್ರಗಳು ಜೊತೆಗೂಡಿ ಕಾರ್ಯನಿರ್ವಹಿಸುವಾಗ ಯಾವುದಾದರೂ ಒಂದು ದೇಶ ಬೇಹುಗಾರಿಕೆಯ ಉದ್ದೇಶದಿಂದ ಸಂಶೋಧನೆಯಲ್ಲಿ ತೊಡಗಿಕೊಂಡು ಮಾಹಿತಿ ಸೋರಿಕೆ ಮಾಡಬಹುದು ಎನ್ನುವ ಆತಂಕವದು. ವಿಶ್ವದ ದೊಡ್ಡಣ್ಣ ಅಮೆರಿಕವಂತೂ ಘಂಟಾಘೋಷವಾಗಿ 'ನಾವು ಕಂಡುಹಿಡಿಯುತ್ತಿರುವ ಲಸಿಕೆಯ ಮಾಹಿತಿಯನ್ನು ಚೀನಾ ಕದಿಯುತ್ತಿದೆ, ವಿಶ್ವದ ಇತರೆ ರಾಷ್ಟ್ರಗಳೆಲ್ಲ ಹುಷಾರಾಗಿರಿ' ಎನ್ನುತ್ತಿದೆ.

## ಪನಾಮಾ ಪೇಪರ್ಸ್

ಕಾರ್ಪೊರೆಟ್ ಸೇವೆ ನೀಡುವ ಪನಾಮಾದ ಕಾನೂನು ಸಂಸ್ಥೆ ಮೊಸಾಕ್ ಫೊನ್ಸೆಕಾದ (Mossac Fonseca) ಕಡತಗಳು, ಕ್ಲೈಂಟ್‌ಗಳ ಮಾಹಿತಿ, ಹೊರರಾಷ್ಟ್ರಗಳ 2,14,488 ಸಂಸ್ಥೆಗಳ ಮಾಹಿತಿಗೆ ಹ್ಯಾಕರ್‌ಗಳು 2016ರಲ್ಲಿ ಕನ್ನ ಹಾಕಿದ್ದರು. ಶ್ರೀಮಂತರು, ಸಾರ್ವಜನಿಕ ಅಧಿಕಾರದಲ್ಲಿ ಇರುವವರ ಖಾಸಗಿ ಮಾಹಿತಿ, ವಿದೇಶಿ ವ್ಯವಹಾರ, ಹೂಡಿಕೆಗಳ ಬಗ್ಗೆ ಅಲ್ಲಿ ಮಾಹಿತಿಯಿತ್ತು. ತೆರಿಗೆ ವಂಚನೆ, ರಾಜಕೀಯ ಗುಪ್ತ ವಿಚಾರಗಳು, ಆರ್ಥಿಕ ಯೋಜನೆಗಳಿಗೆ ಸಂಬಂಧಿಸಿದ ಕಡತ, ರಾಜತಾಂತ್ರಿಕ ಕಡತಗಳು ಇದರಲ್ಲಿದ್ದವು. 80 ದೇಶಗಳು 107 ಮಾಧ್ಯಮ ಸಂಸ್ಥೆಗಳು ಇದನ್ನು ಸು ದ್ದಿ

